# ತುಳುನಾಡಿನ ಆದಿಮ ಚರಿತ್ರೆ

ರಚನೆ : ಪ್ರೊ.ಟಿ. ಮುರುಗೇಶಿ, ಸಹ ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ,
ಎಂ.ಎಸ್.ಆರ್.ಎಸ್. ಕಾಲೇಜು, ಶಿರ್ವ
email : murugesh.turuvekere01@gmail.com

ತುಳುನಾಡಿನ ಆದಿಮ ಅಥವಾ ಪ್ರಾಗೈತಿಹಾಸಿಕ ಮಾನವನ ಚರಿತ್ರೆಯ ಅಧ್ಯಯನಕ್ಕೆ, ಶಿರ್ವದ ಮುಲ್ಕಿ ಸುಂದರ್ ರಾಮ್ ಶೆಟ್ಟಿ ಕಾಲೇಜಿನ ಪ್ರಾಚೀನ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ವಿಭಾಗವು ತನ್ನ ಎರಡು ದಶಕಗಳ ನಿರಂತರ ಪುರಾತತ್ವ ಅನ್ವೇಷಣೆಗಳ ಮೂಲಕ ಹೊಸ ಪ್ರಾಗೈತಿಹಾಸಿಕ ನೆಲೆಗಳು ಮತ್ತು ಪ್ರಾಗೈತಿಹಾಸಿಕ ಕಾಲದ ಬಂಡೆ ಚಿತ್ರಗಳ ಮಹತ್ವದ ನಿವೇಶನಗಳನ್ನು ಬೆಳಕಿಗೆ ತರುವುದರ ಮೂಲಕ, ತುಳುನಾಡಿನ ಪ್ರಾಗೈತಿಹಾಸಿಕ ಅಧ್ಯಯನಕ್ಕೆ ಭದ್ರವಾದ ನೆಲೆಗಟ್ಟನ್ನು ಒದಗಿಸಿದೆ. ಅಂತರಾಷ್ಟ್ರೀಯ ಆದಿಮ ಕಲೆಯ ಹಬ್ಬವನ್ನು ಆದಿಮ ಕಲಾ ನಿವೇಶನವೊಂದರಲ್ಲಿ ಆಚರಿಸುತ್ತಿರುವ ಈ ಶುಭ ಸಂದರ್ಭದಲ್ಲಿ ಮುಲ್ಕಿ ಸುಂದರ್ ರಾಮ್ ಶೆಟ್ಟಿ ಕಾಲೇಜಿನ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗವು ಈ ಕಿರುಪುಸ್ತಿಕೆಯ ಮೂಲಕ ತನ್ನ ಸಂಶೋಧನೆಯ ಸಾರ್ಥಕತೆಯ ಒಂದು ಕಿರು ನೋಟವನ್ನು ಸಾರ್ವಜನಿಕರ, ವಿದ್ವಾಂಸರ ಮುಂದೆ ಸಾದರಪಡಿಸಿದೆ.

## ಆದಿಮ ಚರಿತ್ರೆಯ ಕಾಲಾನುಕ್ರಮಣಿಕೆ

೧. ಪೂರ್ವದ ಹಳೆಶಿಲಾಯುಗ (ಕ್ರಿ.ಪೂ. ೫೦.೦೦೦)

೨. ಮಧ್ಯಪೂರ್ವ ಹಳೆಶಿಲಾಯುಗ (ಕ್ರಿ.ಪೂ. ೫೦.೦೦೦–೩೬.೦೦೦)

೩. ಅಂತ್ಯಪೂರ್ವ ಹಳೆಶಿಲಾಯುಗ (ಕ್ರಿ.ಪೂ. ೩೬.೦೦೦–೧೮.೦೦೦)

೪. ಸೂಕ್ಷ್ಮ ಶಿಲಾಯುಗ (ಕ್ರಿ.ಪೂ. ೧೮.೦೦೦–೧೪.೦೦೦)

೫. ನೂತನ ಶಿಲಾಯುಗ (ಕ್ರಿ.ಪೂ. ೧೪.೦೦೦–೩.೫೦೦)

೬. ತಾಮ್ರಶಿಲಾಯುಗ (ಕ್ರಿ.ಪೂ. ೩.೫೦೦–೧.೫೦೦)

೭. ಕಬ್ಬಿಣಯುಗ ಅಥವಾ ಬೃಹತ್ ಶಿಲಾಯುಗ (ಕ್ರಿ.ಪೂ. ೧.೨೦೦–ಕ್ರಿ.ಶ. ೧೦೦)

ಜಗತ್ತಿನ ಮಾನವ ಚರಿತ್ರೆಯಲ್ಲಿ ಆದಿಮ ಚರಿತ್ರೆ ಎಷ್ಟು ಸುಧೀರ್ಘವಾಗಿದೆ ಎಂಬುದನ್ನು ಮೇಲಿನ ಕಾಲಾನುಕ್ರಮಣಿಕೆ ಸ್ಪಷ್ಟಪಡಿಸುತ್ತದೆ. ಹಾಗಾದರೆ, ತುಳುನಾಡಿನ ಕರಾವಳಿ ಪ್ರದೇಶದಲ್ಲಿ ಮೊಟ್ಟಮೊದಲಿಗೆ ಮಾನವನು ಕಾಣಿಸಿಕೊಂಡಿದ್ದು ಯಾವಾಗ? ಎಂಬ ಪ್ರಶ್ನೆಗೆ ತುಳುನಾಡಿನ ಆದಿಮಾನವನು ಲೋಹಯುಗ (Iron Age) ದವನೆಂದು ಊಹಿಸಬಹುದಾಗಿದೆ. ಎಂಬ ಉತ್ತರ, ಕೇವಲ ಕಪೋಲ ಕಲ್ಪಿತ ಅಸಮರ್ಪಕ ಉತ್ತರವಾಗುತ್ತದೆ.

### ಆದಿಮ ಚರಿತ್ರೆಯ ಅನ್ವೇಷಣೆಗಳು

ಡಾ. ಪಿ ರಾಜೇಂದ್ರನ್ ರವರು ತುಳುನಾಡಿನ ದಕ್ಷಿಣದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಹರಿದು ಮಂಗಳೂರು ಸಮೀಪ ಅರಬ್ಬೀ ಸಮುದ್ರವನ್ನು ಸೇರುವ ನೇತ್ರಾವತಿ ನದಿದಡದ ಉಪ್ಪಿನಂಗಡಿ ಮತ್ತು ಮಾಣಿಯಲ್ಲಿ ಸೂಕ್ಷ್ಮ ಶಿಲಾಯುಗದ ಕಲ್ಲಿನಾಯುಧಗಳನ್ನು ೧೯೮೨–೮೩ ರಲ್ಲಿ ಸಂಶೋಧಿಸಿದರು. ಆದ್ದರಿಂದ, ಡಾ. ಪಿ. ರಾಜೇಂದ್ರನ್ ರವರನ್ನು ತುಳುನಾಡಿನ ಹಾಗೂ ಈಗಿನ ದಕ್ಷಿಣಕನ್ನಡ ಜಿಲ್ಲೆಯ ಆದಿಮ ಚರಿತ್ರೆ ಅಧ್ಯಯನದ ಪಿತಾಮಹನೆಂದು ಕರೆಯಬಹುದಾಗಿದೆ.

ತುಳುನಾಡಿನ ಮತ್ತೋರ್ವ ಆದಿಮ ಚರಿತ್ರೆಯ ಸಂಶೋಧಕ, ಡಾ. ಬಿ. ವಸಂತ ಶೆಟ್ಟಿಯವರು, ೧೯೮೩ ರಲ್ಲಿ ಈಗಿನ ಉಡುಪಿ ಜಿಲ್ಲೆಯ, ಉಡುಪಿ ತಾಲೂಕಿನ ಗಾವಳಿಯಲ್ಲಿ ಆದಿಮ ಬಯಲು ಬಂಡೆ ಚಿತ್ರಗಳನ್ನು ಶೋಧಿಸಿ ಪ್ರಕಟಿಸಿದರು. ಭಾರತದ ಆದಿಮ ಚಿತ್ರಗಳ ಅಧ್ಯಯನದ ಭೂಪಟದಲ್ಲಿ ತುಳುನಾಡಿಗೆ ಸ್ಥಾನವನ್ನು ದೊರಕಿಸಿಕೊಟ್ಟ ಕೀರ್ತಿ ಡಾ. ವಸಂತ ಶೆಟ್ಟಿಯವರಿಗೆ ಸಲ್ಲಬೇಕು. ನಂತರ, ೧೯೮೭ ರಲ್ಲಿ ಉಡುಪಿ ಜಿಲ್ಲೆ, ಉಡುಪಿ ತಾಲೂಕಿನ ಬಂಡಿಮಠದಲ್ಲಿ ನೂತನ ಶಿಲಾಯುಗದ ಕಲ್ಲಿನ ಕೊಡಲಿಯನ್ನು ಸಂಶೋಧಿಸಿ, ತುಳುನಾಡಿನ ಆದಿಮ ಚರಿತ್ರೆಯ ಅಧ್ಯಯನಕ್ಕೆ ಹೊಸ ತಿರುವನ್ನು ನೀಡಿದರು. ಈ ಸಂಶೋಧನೆಗಳ ನಂತರ, ಡಾ. ವಸಂತ ಶೆಟ್ಟಿಯವರು, ಕಿರಾಡಿ, ಕಕ್ಕುಡೆ, ನಡೂರು ಮತ್ತು ಕೋಟತಟ್ಟುಗಳಲ್ಲಿ ನೂತನ ಶಿಲಾಯುಗದ ಕಲ್ಲಿನ ಕೊಡಲಿಗಳು, ಉಂಗುರ ಕಲ್ಲುಗಳನ್ನು ಪತ್ತೆ ಹಚ್ಚಿದರು. ಈ ಮಹತ್ತರ ಆದಿಮ ನಿವೇಶನಗಳ ಶೋಧಗಳಿಂದ ಡಾ. ಬಿ. ವಸಂತ ಶೆಟ್ಟಿಯವರು ಈಗಿನ ಉಡುಪಿ ಜಿಲ್ಲೆಯ ಆದಿಮ ಚರಿತ್ರೆ ಅಧ್ಯಯನಕ್ಕೆ ಭದ್ರವಾದ ಬುನಾದಿಯನ್ನು ಒದಗಿಸಿದರು. ಆದ್ದರಿಂದ ಡಾ. ಬಿ. ವಸಂತ ಶೆಟ್ಟಿಯವರನ್ನು ಉಡುಪಿ ಜಿಲ್ಲೆಯ ಆದಿಮ ಚರಿತ್ರೆಯ ಹರಿಕಾರನೆಂದು ಕರೆಯಬಹುದಾಗಿದೆ.

ತುಳುನಾಡಿನ ಆದಿಮ ಚರಿತ್ರೆಯ ಅಧ್ಯಯನದ ಮುಂದಿನ ಅನ್ವೇಷಣೆಗಳನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಎಲ್. ಎಸ್. ರಾವ್ ರವರು ಕೈಗೊಂಡರು. ೧೯೭೨–೭೩ ಮತ್ತು ೧೯೭೩–೭೪ ರ ಅವಧಿಯಲ್ಲಿ ರಾವ್ ರವರು ನಡೆಸಿದ ಅನ್ವೇಶಣೆಗಳ ಫಲವಾಗಿ, ದಕ್ಷಿಣಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲೂಕಿನ ನಾರಾವಿಯ ನೇತ್ರಾವತಿ ನದಿದಡದಲ್ಲಿ ಪೂರ್ವ ಹಳೆ

ಶಿಲಾಯುಗದ ಕಲ್ಲಿನ ಕಡಿಕತ್ತಿಯನ್ನು ಸಂಶೋಧಿಸಿದರು. ಕುಕ್ಕಂದೂರು, ಗಂಟಿಹೊಳೆ, ಬಡಗಕಜೆಕಾರ, ಮಚ್ಚಿನ, ಬೈಂದೂರು, ಅಂದರ್ ಚೌಕಿ, ಮೂಡುಕೊಣಾಜೆ, ಹಾರಾಡಿ, ಭಾವಿಕೇರಿ, ಹೌಸ, ಕಂಚಿಬೈಲ್, ಶಿರ್‌ಗುಂಜಿ, ಸೂಳೇರ್‌ಬೈಲ್, ಹದಹಿರ್, ತಲ್ಲನ್, ಗೋಕರ್ಣ, ಕುಮುಟಾ ಮುಂತಾದ ಸ್ಥಳಗಳಲ್ಲಿ ಸೂಕ್ಷ್ಮ ಶಿಲಾಯುಗ, ನೂತನ ಶಿಲಾಯುಗ ಮತ್ತು ಬೃಹತ್ ಶಿಲಾಯುಗದ ನಿವೇಶನಗಳನ್ನು ಸಂಶೋಧಿಸಿದರು. ಡಾ. ಹೆಚ್.ಆರ್. ರಘನಾಥ್ ಭಟ್ ರವರು ಶಿರಸಿಯ ಸಮೀಪ ಸೋಂದಾದಲ್ಲಿ, ಡಾ. ಅ. ಸುಂದರ ಅವರು ಕುಮುಟಾ ಸಮೀಪ ಬೋಳೆಯಲ್ಲಿ ಆದಿಮ ಬಯಲು ಬಂಡೆ ಚಿತ್ರಗಳನ್ನು ಶೋಧಿಸಿದ್ದಾರೆ. ಇವರ ನಂತರ, ಡಾ. ಬಿ. ವಸಂತ ಶೆಟ್ಟಿಯವರ ಸಹೋದ್ಯೋಗಿಯಾಗಿದ್ದ ಪುರಾತತ್ವ ವಿದ್ವಾಂಸ ಡಾ. ಕೆ.ಬಿ. ಶಿವತಾರಕ್ ರವರು, ಕುಂದಾಪುರ ತಾಲೂಕಿನ ಕೊಳನ ಕಲ್ ನಲ್ಲಿ ಪೂರ್ವಹಳೆ ಶಿಲಾಯುಗ ಮತ್ತು ಮಧ್ಯಹಳೆ ಶಿಲಾಯುಗದ ಹೆರೆಗತ್ತಿ, ನೀಳಕತ್ತಿ ಹಾಗೂ ಕೈಗೊಡಲಿಯನ್ನು ಸಂಶೋಧಿಸಿದರು. ಇವುಗಳಲ್ಲದೆ. ಬಾರಕೂರಿನ ಸಮೀಪ ಮಸಿಕೆರೆಯಲ್ಲಿ ಸೂಕ್ಷ್ಮ ಶಿಲಾಯುಗದ ನೆಲೆ ಹಾಗೂ ಕೆಳಕುಂಜಾಲು, ಬಾಳಘಟ್ಟ ಮುಂತಾದ ಕಡೆ ನೂತನ ಶಿಲಾಯುಗದ ಕಲ್ಲಿನಾಯುಧಗಳನ್ನು ಸಂಶೋಧಿಸಿದರು. ಇದೇ ಕಾಲಾವಧಿಯಲ್ಲಿ, ಡಾ. ಪಿ. ಎನ್. ನರಸಿಂಹಮೂರ್ತಿಯವರು, ಕಾರ್ಕಳ ತಾಲೂಕಿನ ಪರ್ಪಲೆ ಬೆಟ್ಟ ಮತ್ತು ಉಡುಪಿ ತಾಲೂಕಿನ ಪಾಜಕದ ಸಮೀಪ ಪಾಜೈ ಎಂಬಲ್ಲಿ ನೂತನ ಶಿಲಾಯುಗದ ಕಲ್ಲಿನ ಕೊಡಲಿ ಮತ್ತು ಕಂದು ಬಣ್ಣದ ಮಡಕೆಯ ಅವಶೇಷಗಳನ್ನು ಸಂಶೋಧಿಸಿದರು. ಕಲ್ಯಾಣಪುರದ ಕೆ.ಶ್ರೀಧರ್ ಭಟ್ ಎಂಬ ಹವ್ಯಾಸಿ ಪುರಾತತ್ವ ಸಂಶೋಧಕರು ಉಡುಪಿಯ ಸಗ್ರಿ, ಜೋಗಿಬೆಟ್ಟು ಮುಂತಾದೆಡೆಗಳಲ್ಲಿ ನೂತನ ಶಿಲಾಯುಗದ ಕಲ್ಲಿನ ಆಯುಧಗಳನ್ನು ಸಂಶೋಧಿಸಿದ್ದಾರೆ.

ಡಾ. ಅ. ಸುಂದರ ಅವರು ಹೊಸನಗರ, ತೀರ್ಥಹಳ್ಳಿ ಮತ್ತು ಶೃಂಗೇರಿ ತಾಲೂಕಿನಲ್ಲಿ ಬೃಹತ್ ಶಿಲಾಯುಗದ ವಿವಿಧ ನೆಲೆಗಳನ್ನು ಶೋಧಿಸಿದ್ದಾರೆ.  ಮುಲ್ಕಿ ಸುಂದರ್ ರಾಮ್ ಶೆಟ್ಟಿ ಕಾಲೇಜಿನ ಪುರಾತತ್ವ ವಿದ್ವಾಂಸ ಪ್ರೊ. ಟಿ. ಮುರುಗೇಶಿಯವರು, ೧೯೮೮–೮೯ ರಲ್ಲಿ ಶಿರ್ವ ಮತ್ತು ಕುರ್ಕಾಲುವಿನಲ್ಲಿ ಬೃಹತ್ ಶಿಲಾಯುಗದ ಸಮಾಧಿ ನೆಲೆಗಳನ್ನು ಶೋಧಿಸಿದರು. ನಂತರ, ಕನ್ನರಪಾಡಿ, ಕುಂಜಾರುಗಿರಿ, ಪಾಲುಮನೆ, ಸೊರ್ಪು, ಹೊಯ್ಯಾಣ, ಅಡ್ಕದಕಟ್ಟೆ, ಬೊಮ್ಮರಬೆಟ್ಟು, ಕೊಂಡಾಡಿ, ಬಾಳಘಟ್ಟ–ಹಿರೇಬೆಟ್ಟು, ಹಿಟ್ಟಣಿಗೆ–ಪೆರ್ಡೂರು, ಕೊಡಿಮನೆ, ಗರಡೆ, ಉಪ್ಪೂರು, ಕೀಳಿಂಜೆ, ಸಾಂತೂರು, ಕೆಳ–ಕುಂಜಾಲು, ಸಡಂಬೈಲುಗಳಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳನ್ನು ಸಂಶೋಧಿಸಿದ್ದಾರೆ. ಹೆಬ್ರಿ ಮತ್ತು ಪಳ್ಳಿಯಲ್ಲಿ ಇತ್ತೀಚೆಗೆ ಎರಡು ಬೃಹತ್ ಶಿಲಾಯುಗದ ನಿವೇಶನಗಳನ್ನು ಶೋಧಿಸಿದ್ದಾರೆ. ಕುಂದಾಪುರ ತಾಲೂಕಿನ ಬುದ್ಧನಜೆಡ್ಡುವಿನಲ್ಲಿ ನೂತನ ಶಿಲಾಯುಗ, ತಾಮ್ರ ಶಿಲಾಯುಗ ಕಾಲದ ಬಯಲು ಬಂಡೆ ಚಿತ್ರಗಳನ್ನು ಸಂಶೋಧಿಸಿದ್ದಾರೆ. ಶೀಧರ್ ಭಟ್ ಕೆ ಮತ್ತು ಪ್ರೊ. ಟಿ. ಮುರುಗೇಶಿಯವರು, ಕಲ್ಯಾಣಪುರ ಮತ್ತು ಗಾವಳಿಯಲ್ಲಿ ನೂತನ ಶಿಲಾಯುಗದ ಕಲ್ಲಿನಾಯುಧಗಳು ಮತ್ತು ನಿವೇಶನವನ್ನು ಸಂಶೋಧಿಸಿರುತ್ತಾರೆ. ಇತ್ತೀಚೆಗೆ, ಮಂಗಳೂರು ಸಮೀಪದ ಗುರುಪುರ ಮತ್ತು ಮೂಡಬಿದ್ರೆಯ ಸೋನ್ಸ್ ಫಾರ್ಮನಲ್ಲಿ ನೂತನ ಶಿಲಾಯುಗದ ಕಲ್ಲಿನ ಕೊಡಲಿಗಳು ಪತ್ತೆಯಾಗಿವೆ. ತೀರಾ ಇತ್ತೀಚೆಗೆ ಅವಲಕ್ಕಿ ಪಾರೆ ಎಂಬ ನಿವೇಶನದಲ್ಲಿ ಪ್ರೊ.ಟಿ.ಮುರುಗೇಶಿಯವರು ಸಂಶೋಧಿಸಿದ ಸೂಕ್ಷ್ಮ ಶಿಲಾಯುಗ ಕಾಲದ ಆದಿಮ ಬಯಲು ಬಂಡೆ ಚಿತ್ರಗಳು, ಕರಾವಳಿ ಕರ್ನಾಟಕದ ಪ್ರಾಗೈತಿಹಾಸಿಕ ಅಧ್ಯಯನಕ್ಕೆ ಮಹತ್ತರವಾದ ಕೊಡುಗೆಯನ್ನು ನೀಡಿವೆ. ಡಾ. ಬಿ. ಜಗದೀಶ್ ಶೆಟ್ಟಿ ಮತ್ತು ಪ್ರೊ. ಗುರುಮೂರ್ತಿಯವರು ಸಹ ಕೆಲವು ಮಹತ್ವದ ಬೃಹತ್ ಶಿಲಾಯುಗದ ನಿವೇಶನಗಳನ್ನು ಸಂಶೋಧಿಸಿದ್ದಾರೆ. ತೀರಾ ಇತ್ತೀಚೆಗೆ, ಶ್ರುತೇಶ್ ಆಚಾರ್ಯ ಮತ್ತು ಸುಭಾಷ್ ರವರು ಎರಡು ನೂತನ ಶಿಲಾಯುಗದ ಕಲ್ಲಿನ ಕೊಡಲಿಗಳನ್ನು ಉಡುಪಿ ಜಿಲ್ಲೆಯಲ್ಲಿ ಸಂಶೋಧಿಸಿದ್ದಾರೆ. ಬುದ್ಧನಜೆಡ್ಡು, ಕಮಲಶಿಲೆ ಹಾಗೂ ಮೂಡಬಿದಿರೆಗಳಲ್ಲಿ ನೂತನ ಶಿಲಾಯುಗದ ಕಲ್ಲಿನಾಯುಧಗಳು ಪತ್ತೆಯಾಗಿವೆ.

ಈ ಮೇಲಿನ ಸಂಶೋಧನೆಗಳು ನಿಸ್ಸಂದೇಹವಾಗಿ ತುಳುನಾಡಿನ, ತುಳುವರ ಆದಿಮ ಚರಿತ್ರೆಗೆ ಅಗತ್ಯವಾದ ಭೂಮಿಕೆಯನ್ನು ಒದಗಿಸಿವೆ.

## ಹೊಸ ಶೋಧಗಳ ಬೆಳಕಿನಲ್ಲಿ ತುಳುವರ ಆದಿಮ ಚರಿತ್ರೆ

### ಹಳೆ ಶಿಲಾಯುಗ:

ಕುಂದಾಪುರ ತಾಲೂಕಿನ ಕೊಳನಕಲ್ಲು, ಬುದ್ಧನಜೆಡ್ಡು, ಗಾವಳಿ ಹಾಗೂ ತೀರ್ಥಹಳ್ಳಿ ತಾಲೂಕಿನ ಮೃಗವಧೆಯಲ್ಲಿ ದೊರೆತ ಕಲ್ಲಿನ ಕೈಗೊಡಲಿಗಳು ಮತ್ತು ಬೆಳ್ತಂಗಡಿ ತಾಲೂಕಿನ ನಾರವಿಯಲ್ಲಿ ದೊರೆತ ಹಳೆ ಶಿಲಾಯುಗದ ಕಲ್ಲಿನ ಆಯುಧಗಳು ಸಂಶಯಾತೀತವಾಗಿ, ಪಶ್ಚಿಮ ಕರಾವಳಿಯ ತುಳುನಾಡು ಕ್ರಿ.ಪೂ. ೫೦.೦೦೦ ವರ್ಷಗಳಷ್ಟು ಹಿಂದೆಯೇ ಮಾನವ ಚಟುವಟಿಕೆಯ ತಾಣವಾಗಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಆದರೆ, ಈ ಕಾಲದ ಆದಿಮ ಮಾನವ ಅಲೆಮಾರಿಯಾಗಿ ಬದುಕುತ್ತಿದ್ದ. ಬೇಟೆ ಮತ್ತು ಆಹಾರ ಸಂಗ್ರಹಣೆ ಅವನ ಬಹು ಮುಖ್ಯ ಆಸಕ್ತಿಯಾಗಿತ್ತು. ಹಳೆಶಿಲಾಯುಗದ ಕೊನೆಯ ಕಾಲಘಟ್ಟವನ್ನು ಅಂತ್ಯಪೂರ್ವ ಹಳೆ ಶಿಲಾಯುಗವೆಂದು ಕರೆಯಲಾಗಿದೆ. ಈ ಕಾಲವನ್ನು ಸಾಮಾನ್ಯವಾಗಿ ಹಿಮಯುಗವೆಂದು ಕರೆಯಲಾಗುತ್ತದೆ. ತುಳುನಾಡಿನಲ್ಲಿ ಈ ಕಾಲಾವಧಿಯ ಯಾವುದೇ ಕಲ್ಲಿನ ಆಯುಧಗಳು ಇದುವರೆಗೆ ದೊರೆತಿಲ್ಲ. ಈ ಅವಧಿಯಲ್ಲಿ ಭಾರತದ ಕರಾವಳಿಯ ಪ್ರದೇಶಗಳು ಸಮುದ್ರದ ನೀರಿನಲ್ಲಿ ಮುಳುಗಿಹೋಗಿದ್ದವು. ಆದ್ದರಿಂದ, ಅಂತ್ಯಪೂರ್ವ ಹಳೆ ಶಿಲಾಯುಗದ ಅವಶೇಷಗಳು ತುಳುನಾಡಿನಲ್ಲಿ ನಮಗೆ ದೊರಕುವುದಿಲ್ಲ. ಅಂತ್ಯಪೂರ್ವ ಹಳೆ ಶಿಲಾಯುಗದ ಮನುಷ್ಯನನ್ನು ಬುದ್ಧಿವಂತ ಮನುಷ್ಯ, ನರಭಕ್ಷಕನೆಂದು ಗುರುತಿಸಲಾಗಿದೆ. ಈತ ಆಳವಾದ ನೈಸರ್ಗಿಕ ಗುಹೆಗಳಲ್ಲಿ ವಾಸಿಸುತ್ತಿದ್ದ ಗುಹಾ

ಮಾನವನಾಗಿದ್ದ. ಕೈಗೊಡಲಿ, ಚಕ್ಕೆ ಕಲ್ಲಿನ ಆಯುಧಗಳು, ಬಾಣದ ಮತ್ತು ಈಟಿಯ ಕಲ್ಲಿನ ಮೊನೆಗಳು ಹಾಗೂ ಎಲುಬಿನ ಆಯುಧಗಳನ್ನು ಆತ ಉಪಯೋಗಿಸುತ್ತಿದ್ದ. ಮಧ್ಯಪೂರ್ವ ಹಳೆ ಶಿಲಾಯುಗದಲ್ಲಿಯೇ ಈತನಿಗೆ ಬೆಂಕಿಯ ಉಪಯೋಗ ತಿಳಿದಿತ್ತು. ಈತ ಆಳವಾದ ಗುಹೆಗಳಲ್ಲಿ ನೈಸರ್ಗಿಕ ಬಣ್ಣಗಳನ್ನು ಬಳಸಿಕೊಂಡು ತಾನು ಕಂಡು-ಕೇಳಿದ, ಅನುಭವಿಸಿದ ಹಾಗೂ ಬೇಟೆಯ ಚಿತ್ರಗಳನ್ನು ಗುಹೆಗಲ್ಲಿ ರಚಿಸಿದ್ದಾನೆ. ಇಂತಹ ವರ್ಣಚಿತ್ರಗಳು ಭಾರತದ ಮದ್ಯಪ್ರದೇಶದಲ್ಲಿನ ಬಿಂಬೆಟ್ಕಾ ಗುಹೆಗಳಲ್ಲಿ ಕಂಡು ಬರುತ್ತವೆ. ಇಲ್ಲಿನ ನೂರಾರು ಗುಹೆಗಳಲ್ಲಿ ಸಾವಿರಾರು ಆದಿಮ ವರ್ಣಚಿತ್ರಗಳಿರುವುದರಿಂದ ಈ ಗುಹೆಗಳಿರುವ ಪ್ರದೇಶವನ್ನು "ವಿಶ್ವ ಪರಂಪರೆಯ ರಕ್ಷಿತ ತಾಣವೆಂದು" ಎಂದು ಘೋಷಿಸಲಾಗಿದೆ. ಕನಾಟಕದ ಬಾದಾಮಿ, ಹಂಪಿ, ಬಳ್ಳಾರಿ, ಗಂಗಾವತಿ, ಬಿರೂರು, ರಾಮನಗರ, ಮಂಡ್ಯ ಜಿಲ್ಲೆಯ ಕುಂತಿಗುಡ್ಡ, ಶಿವಮೊಗ್ಗ, ಚಿತ್ರದುರ್ಗದ ಪರಿಸರದಲ್ಲಿಯೂ ಇಂತಹ ಚಿತ್ರಗಳಿವೆ.

## ಸೂಕ್ಷ್ಮ ಶಿಲಾಯುಗ:

ಸುಮಾರು ಕ್ರಿ.ಪೂ. ೩೬.೦೦೦ ದಿಂದ ೧೮.೦೦೦ ವರ್ಷಗಳ ಸುಧೀರ್ಘ ಹಿಮಯುಗ ಕೊನೆಗೊಂಡು, ಸಮುದ್ರದ ನೀರು ಹಿಂದೆ ಸರಿಯುವುದರೊಂದಿಗೆ, ಹಿತಕರವಾದ ಹೊಸಯುಗ ಆರಂಭವಾಯಿತು. ಅಂತ್ಯಪೂರ್ವ ಶಿಲಾಯುಗದಲ್ಲಿ ಸಂಭವಿಸಿದ ಹವಾಮಾನದಲ್ಲಿನ ಧಿಡೀರ್ ಬದಲಾವಣೆಯಿಂದ, ದೈತ್ಯ ಪ್ರಾಣಿಗಳ ಯುಗವೂ ಅಂತ್ಯವಾಯಿತು. ಹಿಮಯುಗದ ಅಂತ್ಯ ಮತ್ತು ಹಿತಕರವಾದ ಹೊಸಯುಗಾರಂಭ, ಪಶ್ಚಿಮ ಕರಾವಳಿಯ ತುಳುನಾಡಿನಲ್ಲಿ ಮತ್ತೆ ಮಾನವನ ಚಟುವಟಿಕೆಗಳು ಗರಿಗೆದರಲು



ಅವಲಕ್ಕಿ ಪಾರೆ



ಬುದ್ದನ ಜೆಡ್ಡು ನವಿಲು

ಕಾರಣವಾಯಿತು. ತುಳುನಾಡಿನ ಎಲ್ಲೆಡೆ ಅಧಿಕ ಸಂಖ್ಯೆಯಲ್ಲಿ ಕಂಡು ಬರುವ ಸೂಕ್ಷ್ಮ ಶಿಲಾಯುಗದ ನೆಲೆಗಳು ಇದಕ್ಕೆ ಸಾಕ್ಷಿಯಾಗಿವೆ. ದಕ್ಷಿಣಕನ್ನಡ ಜಿಲ್ಲೆಯ, ನಾರಾವಿ, ಉಪ್ಪಿನಂಗಡಿ, ಮಾಣಿಯಲ್ಲಿನ ಸೂಕ್ಷ್ಮ ಶಿಲಾಯುಗ ಕಾಲದ ಮಾನವ ನದಿ ದಂಡೆಗಳನ್ನು ಆಶ್ರಯಿಸಿದ್ದರೆ, ಬಡಗ-ಕಜೆಕಾರಿನ ಪಾಂಡವರಕಲ್ಲಿನ ಸೂಕ್ಷ್ಮಶಿಲಾಯುಗ ಕಾಲದ ಮಾನವ, ಬೆಟ್ಟ-ಗುಡ್ಡಗಳನ್ನು ಆಶ್ರಯಿಸಿಕೊಂಡಿದ್ದ. ಉಡುಪಿ ಜಿಲ್ಲೆಯ, ಕುಕ್ಕಂದೂರು, ಗಂಟಿಹೊಳೆ, ಅವಲಕ್ಕಿ ಪಾರೆ ಮತ್ತಿತರ ಕಡೆ ಸೂಕ್ಷ್ಮ ಶಿಲಾಯುಗ ಕಾಲದ ಮಾನವ ಬೆಟ್ಟ-ಗುಡ್ಡಗಳನ್ನೇ ಆಶ್ರಯಿಸಿದ್ದ. ಎಲ್. ಎಸ್. ರಾವ್ ರವರ ಅಧ್ಯಯನಗಳು ಕುಕ್ಕಂದೂರಿನಲ್ಲಿ ಸೂಕ್ಷ್ಮ ಶಿಲಾಯುಗದ ಮಾನವ ಬೆಟ್ಟ-ಗುಡ್ಡಗಳಲ್ಲಿನ ಚಿಕ್ಕ, ಚಕ್ಕ ನೈಸರ್ಗಿಕ ಗುಹೆಗಳಲ್ಲಿ, ಕಲ್ಲಿನಾಸರೆಗಳಲ್ಲಿ ವಾಸಿಸಿತ್ತಿದ್ದನೆಂದು ದೃಢಪಡಿಸಿದೆ. ಇದಕ್ಕೆ ವ್ಯತಿರಿಕ್ತವಾಗಿ, ಮಸಿಕೆರೆ, ಭಟ್ಕಳ ಮತ್ತು ಕುಮುಟಾಗಳಲ್ಲಿನ ಸೂಕ್ಷ್ಮ ಶಿಲಾಯುಗದ ಮಾನವ ಸಮುದ್ರದ ದಂಡೆಗಳನ್ನು ಆಶ್ರಯಿಸಿ ಜೀವಿಸುತ್ತಿದ್ದ. ಈ ಅಂಶಗಳು ಸ್ಪಷ್ಟವಾಗಿ ತುಳುನಾಡಿನ ಸೂಕ್ಷ್ಮ ಶಿಲಾಯುಗದ ಮಾನವ ಬೇಟೆಗಾರಿಕೆ, ಮೀನುಗಾರಿಕೆ ಹಾಗೂ ಜೇನು ಇತರೆ ಗೆಡ್ಡೆ-ಗೆಣಸುಗಳ ಸಂಗ್ರಹಣೆಯೊಂದಿಗೆ ಜೀವಿಸುತ್ತಿದ್ದ ಎಂಬುದನ್ನು ಮನದಟ್ಟು ಮಾಡುತ್ತವೆ. ಇದರಿಂದ ಈ ಮಾನವ ತಾತ್ಕಾಲಿಕ ಕಲ್ಲಿನಾಸರೆ ಅಥವಾ ಗುಹಾ ನಿವಾಸಿಯಾಗಿ, ಬಹುತೇಕ ಅಲೆಮಾರಿಯಾಗಿಯೇ ಜೀವಿಸುತ್ತಿದ್ದ.

ಸೂಕ್ಷ್ಮ ಶಿಲಾಯುಗದ ಬದಲಾದ ಹವಾಮಾನ, ಜೀವಸಂಕುಲ, ಸಸ್ಯಸಂಕುಲ ಮತ್ತು ಮಾನವ ಜೀವನದ ಮೇಲೆ ಅಗಾಧ ಪರಿಣಾಮವನ್ನು ಉಂಟುಮಾಡಿದವು. ದೈತ್ಯ ಪ್ರಾಣಿಗಳು ನಾಶವಾಗಿ ಚಿಕ್ಕ-ಚಿಕ್ಕ ಪ್ರಾಣಿ ಸಂಕುಲಗಳು ಕಾಣಿಸಿಕೊಂಡವು. ಹಿಮಯುಗದಲ್ಲಿ ನಾಶವಾಗಿದ್ದ ದಟ್ಟ ಅರಣ್ಯಗಳು ಮತ್ತೆ ಚಿಗುರೊಡೆದವು. ಇವೆಲ್ಲದರ ಪರಿಣಾಮವಾಗಿ ಮನುಷ್ಯ ಒರಟಾದ, ಭಾರವಾದ, ಕಲ್ಲಿನಾಯೂಧಗಳಿಗೆ ಬದಲಾಗಿ ಚಿಕ್ಕ-ಚಿಕ್ಕ ಪ್ರಾಣಿಗಳ ಬೇಟೆಗೆ ಅನುಕೂಲವಾದ ಅತ್ಯಂತ ಚಿಕ್ಕ-ಚಿಕ್ಕ ಕಲ್ಲಿನ

ಆಯುಧಗಳನ್ನು ತಯಾರಿಸಿದ. ಆದ್ದರಿಂದಲೇ ಈ ಯುಗವನ್ನು ಸೂಕ್ಷ್ಮ ಶಿಲಾಯುಗವೆಂದು ಕರೆಯಲಾಗಿದೆ. ತುಳುನಾಡಿನ ಸೂಕ್ಷ್ಮ ಶಿಲಾಯುಗದ ಮಾನವ ಸ್ಥಳೀಯವಾಗಿ ಲಭ್ಯವಿದ್ದ, ಕಲ್ಲುಗಳಿಂದ ಉದ್ದನೆಯ ನೀಳ ಬ್ಲೇಡುಗಳು, ಅರ್ಧಚಂದ್ರಾಕೃತಿಯ



ಅವಲಕ್ಕಿಪಾರೆ ಸಂಶೋಧನಾ ತಂಡ

ಹೆರೆಗತ್ತಿಗಳು, ಚಿಕ್ಕ–ಚಿಕ್ಕ ಬಾಣದ ಮೊನೆಗಳು, ಈಟಿಗಳು ಮುಂತಾದ ಆಯುಧಗಳನ್ನು ತಯಾರಿಸಿದ್ದಾನೆ. ಬುದ್ಧನ ಜೆಡ್ಡುವಿನ ಬಯಲು ಬಂಡೆ ಚಿತ್ರಗಳಲ್ಲಿ ಪತ್ತೆಯಾಗಿರುವ ಜಿಂಕೆ ಮತ್ತು ನವಿಲಿನ ಚಿತ್ರಗಳು ಸೂಕ್ಷ್ಮ ಶಿಲಾಯುಗ ಕಾಲದ ಚಿತ್ರಗಳೆಂದು ಪ್ರಖ್ಯಾತ ಕಲಾ ವಿಮರ್ಶಕ ಡಾ. ಇರ್ವಿನ್ ನ್ಯೂಮೇಯರ್ ರವರು ಅಭಿಪ್ರಾಯಪಟ್ಟಿದ್ದಾರೆ. ಇದರಿಂದ, ಬುದ್ಧನ ಜೆಡ್ಡುವಿನ ಸೋಕ್ಷ್ಮ ಶಿಲಾಯುಗದ ಮಾನವ ಜಿಂಕೆ, ನವಿಲಿನಂತಹ ಚಿಕ್ಕ ಚಿಕ್ಕ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದನೆಂಬುದು ದೃಢವಾಗುತ್ತದೆ. ಅವಲಕ್ಕಿ ಪಾರೆ ನಿವೇಶನ ಉಡುಪಿ ಜಿಲ್ಲೆಯಲ್ಲಿ ಇದುವರೆಗೆ ದೊರೆತಿರುವ ಅತಿ ದೊಡ್ಡ ಸೂಕ್ಷ್ಮ ಶಿಲಾಯುಗ ಕಾಲದ ಆದಿಮ ಚಿತ್ರಕಲೆಯ ನಿವೇಶನವಾಗಿದೆ. ಅವಲಕ್ಕಿಪಾರೆ ಸುಮಾರು ೨೦–೩೦ ಎಕರೆ ವಿಸ್ತಾರವಾದ ಸಮತಟ್ಟಾಧ ಬಯಲು, ಸುತ್ತಲೂ ಕಾಡಿನಿಂದ ಆವೃತ್ತವಾಗಿದೆ.  ಈ ಬಯಲಿನ ಪಶ್ಚಿಮಕ್ಕೆ ಕಡಿದಾದ ಕಣಿವೆಯಿದೆ. ಬಯಲಿನಲ್ಲಿ ಅಲ್ಲಲ್ಲಿ ಚಿಕ್ಕ ಚಿಕ್ಕ ನೀರಿನ ಹೊಂಡಗಳಿದ್ದು, ಸರಿಸುಮಾರು ನವೆಂಬರ್–ಡಿಸೆಂಬರ್ ವರೆಗೆ ಅವುಗಳಲ್ಲಿ ನೀರು ಇರುತ್ತದೆ. ಈ ಸಮತಟ್ಟಾದ ಬಯಲು ಬಂಡೆಯ ಮೇಲೆ ಕಲ್ಲಿನಿಂದ ಕುಟ್ಟಿ – ಉಜ್ಜಿ ಮಾಡಿದ ಆದಿಮ ಕಾಲದ ಮಾನವನ ಚಿತ್ರಗಳು ಹಾಗೂ ಕಲ್ಲುಗುಳಿಗಳಿವೆ. ಅವಲಕ್ಕಿ ಪಾರೆಯ ಆದಿಮ ಚಿತ್ರಗಳ ಸಮೀಪ ಹಾಗೂ ಸುತ್ತ–ಮುತ್ತ, ಸುಮಾರು ಎರಡು ಕಿ.ಮೀ ವ್ಯಾಪ್ತಿಯಲ್ಲಿ ಅವಲಕ್ಕಿಯನ್ನು ಎಲ್ಲೆಡೆ ಚೆಲ್ಲಿದಂತೆ ಚಿಕ್ಕ–ಚಿಕ್ಕ ಬಿಳಿಕಲ್ಲುಗಳ ರಾಶಿ ಕಂಡುಬರುತ್ತದೆ. ಆದ್ದರಿಂದ, ಈ ಪಾರೆಯನ್ನು ಅವಲಕ್ಕಿ ಪಾರೆ ಎಂದು ಜನ ಕರೆಯುತ್ತಾರೆ.  ಅವಲಕ್ಕಿ ಪಾರೆಯ ಚಿತ್ರಗಳು ಮೂಲತಃ ಬೇಟೆಯನ್ನು ಪ್ರಾತಿನಿಧಿಕವಾಗಿ ಸಂಕೇತಿಸುವ ಶಿಲ್ಪಗಳಾಗಿವೆ. ಹಂದಿ ಬೇಟೆ, ಜಿಂಕೆ ಬೇಟೆ, ಹಕ್ಕಿ ಬೇಟೆ ಹಾಗೂ ವಿಶೇಷವಾಗಿ ಕಾಡುಗೂಳಿಗಳ ಬೇಟೆ ಇಲ್ಲಿನ ಚಿತ್ರಗಳ ಪ್ರಮುಖ ವಸ್ತುವಾಗಿದೆ. ಇಲ್ಲಿ ದೊರೆತ ಕಲ್ಲಿನ ಆಯುಧಗಳು ಸಹ ಮೂಲತಃ ಬೇಟೆಯ ಸಾಧನಗಳಾಗಿವೆ. ಆದ್ದರಿಮದ, ಕೃಷಿ ಪ್ರಧಾನ ಆರ್ಥಿಕ ಜೀವನದ ಆರಂಭದ ಮುಂಚಿನ ಕಾಲದ ಚಿತ್ರಗಳಿವು ಎಂದು ತರ್ಕಿಸಬಹುದಾಗಿದೆ. ಅಂದರೆ, ಅವಲಕ್ಕಿ ಪಾರೆಯ ಮಾನವ ಆಹಾರ ಸಂಗ್ರಹಣೆ ಮತ್ತು ಬೇಟೆಗಾರಿಕೆಯ ಆರ್ಥಿಕತೆಯನ್ನು ಹೊಂದಿದ್ದ ಮಾನವನೆಂದು ತರ್ಕಿಸಬಹುದಾಗಿದೆ. ಬುದ್ಧನಜೆಡ್ಡು ನಿವೇಶನದ ಚಿತ್ರಗಳು ಕೃಷಿ ಪ್ರಧಾನ ಹಾಗೂ ಸ್ಥಿರ ಜೀವನವನ್ನು ಪ್ರತಿನಿಧಿಸುವ ಚಿತ್ರಗಳಾದರೆ, ಅವಲಕ್ಕಿ ಪಾರೆಯ ಚಿತ್ರಗಳು ಇದಕ್ಕೆ ತದ್ವಿರುದ್ಧವಾದ ಬೇಟೆಗಾರಿಕೆ ಪ್ರಧಾನವಾದ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತವೆ.

ಅವಲಕ್ಕಿ ಪಾರೆಯಲ್ಲಿ ಗೂಳಿಗಳು ಬೇಟೆಯ ವಸ್ತುಗಳಾದರೆ, ಬುದ್ಧನಜೆಡ್ಡುವಿನಲ್ಲಿ ಗೂಳಿಗಳು ಆರಾಧನೆಯ ವಸ್ತುಗಳಾಗಿವೆ. ಈ ಸಾಂಸ್ಜೃತಿಕ ವೈರುದ್ಯಗಳು ಹಾಗೂ ಆಯುಧಗಳು ಮತ್ತು ಚಿತ್ರಗಳು ಅವಲಕ್ಕಿ ಪಾರೆ ನಿವೇಶನದ ಕಾಲಮಾನ ನಿರ್ಣಯಿಸುವ ಪ್ರಮುಖ ಅಂಶಗಳಾಗಿವೆ.

ಉಪ್ಪಿನಂಗಡಿಯ ನೇತ್ರಾವತಿ ನದಿ ದಡದಲ್ಲಿ ದೊರೆತ ಕಲ್ಲಿನಾಯುಧಗಳ ಜೊತೆ ಕಾಡು ಗೂಳಿಯ ಅಸ್ಥಿ ಅವಶೇಷಗಳೂ ಪತ್ತೆಯಾಗಿವೆ. ಇದರಿಂದ ಈತ, ನದಿಯ ಪ್ರಪಾತದಲ್ಲಿ ಕಾಡು ಪ್ರಾಣಿಗಳನ್ನು ಬೆದರಿಸಿ ಬೀಳಿಸಿ, ಅವುಗಳನ್ನು ಆಹಾರಕ್ಕಾಗಿ ಬಳಸಿರುವುದು ವೇದ್ಯವಾಗುತ್ತದೆ. ಸುಮಾರು ೩೦ ಕ್ಕೂ ಹೆಚ್ಚು ಸೂಕ್ಷ್ಮ ಶಿಲಾಯುಗದ ನೆಲೆಗಳು ತುಳುನಾಡಿನಲ್ಲಿ ಪತ್ತೆಯಾಗಿವೆ.

## ನೂತನ ಶಿಲಾಯುಗ:

ಸೂಕ್ಷ್ಮ ಶಿಲಾಯುಗದ ನಂತರ ಕಂಡುಬರುವ ಆದಿಮ ಸಂಸ್ಕೃತಿಯನ್ನು ನೂತನ ಶಿಲಾಯುಗವೆಂದು ಕರೆಯಲಾಗುತ್ತದೆ. ಈ ಸಂಸ್ಕೃತಿಯ ಕಲ್ಲಿನಾಯುಧಗಳು, ತುಳುನಾಡಿನ ದಕ್ಷಿಣಕನ್ನಡ ಜಿಲ್ಲೆಯ, ಮೂಡಬಿದ್ರೆ, ಗುರುಪುರ, ಉಡುಪಿ ಜಿಲ್ಲೆಯ ಸಗ್ರಿ, ಚಕ್ರತೀರ್ಥ, ಕೊಜಕುಳಿ, ಹಿರೇಬೆಟ್ಟುವಿನ ಬಾಳಘಟ್ಟ, ಪೆರ್ಡೂರು ಸಮೀಪದ ಜೋಗಿಬೆಟ್ಟು, ಕಲ್ಯಾಣಪುರ ಸಮೀಪದ ಕೊಳಂಬೆ, ಪಾಜಕ ಸಮೀಪದ ಪಾಜೈ, ನೀಲಾವರ ಸಮೀಪದ ಕೆಳಕುಂಜಾಲುವಿನ ಬಾಳೆಬೈಲು, ಮಾಣಿಬೆಟ್ಟು, ಬ್ರಹ್ಮಾವರ ಸಮೀಪದ

ಬಂಡಿಮಠ, ಕಕ್ಕುಡೆ, ನಡೂರು, ಕಿರಾಡಿ, ಕೋಟತಟ್ಟು, ಬುದ್ಧನಜೆಡ್ಡು, ಗಾವಳಿ ಮತ್ತು ಕಮ್ಮರಸಾಲೆ (ಕಮಲಶಿಲೆ) ಮುಂತಾದ


ಗಾವಳಿ

ಪ್ರದೇಶದಲ್ಲಿ ಕಂಡು ಬಂದಿವೆ. ತೀರ್ಥಹಳ್ಳಿ ತಾಲೂಕಿನ ಮೃಗವಧೆ ಮತ್ತು ಕೊಪ್ಪ ತಾಲೂಕಿನ ಪುರದಮನೆಯಲ್ಲಿಯೂ ಸಹ


ಗಾವಳಿ

ನೂತನ ಶಿಲಾಯುಗದ ಕಲ್ಲಿನ ಕೊಡಲಿಗಳು ಕಂಡುಬಂದಿವೆ. ಇವುಗಲ್ಲಿ, ಗಾವಳಿ, ಪಾಜೈ, ಕಲ್ಯಾಣಪುರ ಮತ್ತು ಬುದ್ಧನಜೆಡ್ಡು ಹಾಗೂ ಮೂಡಬಿದ್ರೆಯ ಸೋನ್ಸ್ ಫಾರ್ಮ್‌ಗಳನ್ನು ನೂತನ ಶಿಲಾಯುಗದ ಮಾನವನ ವಸತಿ ನಿವೇಶನಗಳೆಂದು ಗುರುತಿಸಲಾಗಿದೆ.

**ನೂತನ ಶಿಲಾಯುಗದ ಕ್ರಾಂತಿ:**

ಅಲೆಮಾರಿ ಆಹಾರ ಸಂಗ್ರಾಹಕನಾಗಿದ್ದ ಮಾನವ ನೂತನ ಶಿಲಾಯುಗದಲ್ಲಿ ಆಹಾರದ ಉತ್ಪಾದಕನಾಗಿ ಬದಲಾದ. ಈ ಬದಲಾವಣೆ, ಮಾನವ ಬದುಕಿನಲ್ಲಿ ಕ್ರಾಂತಿಕಾರಕ ಹೆಜ್ಜೆಯಾಯಾಯಿತು. ಆದ್ದರಿಂದ, ಇತಿಹಾಸಕಾರರು ಈ ಕಾಲವನ್ನು ನೂತನ ಶಿಲಾಯುಗದ ಕ್ರಾಂತಿ ಎಂದು ಕರೆದಿದ್ದಾರೆ. ತುಳುನಾಡಿನ ನೂತನ ಶಿಲಾಯುಗದ ನಿವೇಶನಗಳು, ನಿಶ್ಚಿತವಾಗಿಯೂ, ಈ ಸಂಸ್ಕೃತಿಯ ಪ್ರಮುಖ ಹೆಜ್ಜೆ ಗುರುತುಗಳಾಗಿದ್ದು, ಇದನ್ನು ತುಳುವ ಸಂಸ್ಕೃತಿಯ ತಾಯಿಬೇರು ಎಂದು ಪರಿಗಣಿಸಬಹುದಾಗಿದೆ.

ಭಾರತೀಯ ಪುರಾತತ್ವ ಇಲಾಖೆಯ ಎಲ್.ಎಸ್. ರಾವ್ ರವರು ಕೋಟತಟ್ಟುವಿನಲ್ಲಿ ನಡೆಸಿದ ಒಂದು ಕಿರು ಉತ್ಖನನದ ಹೊರತಾಗಿ, ಬೇರೆ ಯಾವುದೇ ನಿವೇಶನಗಳಲ್ಲಿ ಇದುವರೆಗೆ ಉತ್ಖನನಗಳು ನಡೆದಿರುವುದಿಲ್ಲ. ತುಳುನಾಡಿನಲ್ಲಿ ದೊರೆತ, ನೂತನ ಶಿಲಾಯುಗದ ಕಲ್ಲಿನಾಯುಧಗಳು, ಮಡಕೆಯ ಅವಶೇಷಗಳು ಹಾಗೂ ಬಯಲು ಬಂಡೆ ಚಿತ್ರಗಳ ಸಹಾಯದಿಂದ ಈ ಕಾಲದ ಮಾನವನ ಚಟುವಟಿಕೆಗಳನ್ನು ಸ್ಥೂಲವಾಗಿ ತಿಳಿಯಲು ಸಾದ್ಯವಾಗುತ್ತದೆ.

ಕೃಷಿ ಮತ್ತು ಪಶುಪಾಲನೆ ನೂತನ ಶಿಲಾಯುಗದ ಎರಡು ಮೂಲಭೂತ ಅಂಶಗಳು. ಬುದ್ಧನಜೆಡ್ಡುವಿನ ಬಯಲು ಬಂಡೆ ಆದಿಮ ಚಿತ್ರಗಳಲ್ಲಿ ಚಿತ್ರಿತವಾಗಿರುವ ದನ ಮತ್ತು ಕರುವಿನ ಚಿತ್ರಗಳು ನಿಶ್ಚಿತವಾಗಿಯೂ ತುಳುನಾಡಿನ ನೂತನ ಶಿಲಾಯುಗದ



ಬುದ್ದನ ಜೆಡ್ಡು ನವಿಲು

ಮಾನವ ಪಶುಪಾಲಕನಾಗಿದ್ದ ಎಂಬುದನ್ನು ದೃಢಪಡಿಸುತ್ತವೆ. ತುಳುನಾಡಿನಲ್ಲಿ ದೊರೆತ ನೂತನ ಶಿಲಾಯುಗದ ಕಲ್ಲಿನಾಯುದಗಳಲ್ಲಿ ಹೆಚ್ಚಿನ ಪ್ರಮಾಣದ ಆಯುಧಗಳು, ಕಲ್ಲಿನ ಕೊಡಲಿಗಳಾಗಿವೆ. ಆದ್ದರಿಂದ, ತುಳುನಾಡಿನಲ್ಲಿ ಮೊಟ್ಟ ಮೊದಲ



ಗಾವಳಿ

ಬಾರಿಗೆ ಕಾಡುಗಳನ್ನು ಕಡಿದು, ಕರಾವಳಿಯ ಭೂಪ್ರದೇಶವನ್ನು ಮಾನವ ವಸತಿ ಯೋಗ್ಯವನ್ನಾಗಿ ಮಾಡಿದ ವ್ಯಕ್ತಿ, ನೂತನ ಶಿಲಾಯುಗದ ಮಾನವ ಎಂಬುದರಲ್ಲಿ ಯಾವುದೇ ಅನುಮಾನಗಳಿಲ್ಲ. ನಂತರ, ಕಲ್ಲಿನ ಸುತ್ತಿಗೆಗಳು, ಗಾವಳಿ, ಕಲ್ಯಾಣಪುರಗಳಲ್ಲಿ, ಕಲ್ಲಿನ ಬಾಚಿಗಳು, ಮಂಗಳೂರು, ಗಾವಳಿಯಲ್ಲಿ, ನೇಗಿಲ ಕುಳ (ನಾಯೆರ್) ಕೆಳಕುಂಜಾಲು ಮತ್ತು ಜೋಗಿಬೆಟ್ಟುವಿನಲ್ಲಿ, ಕೃಷಿ ಚಟುವಟಿಕೆಯ ಸಂದರ್ಭದಲ್ಲಿ ಭೂಮಿಯನ್ನು ಅಗೆಯಲ್ಲು ಉಪಯೋಗಿಸುತ್ತಿದ್ದ ಕೋಲಿಗೆ ಹಾಕಲು ಬಳಸುತ್ತಿದ್ದ ದುಂಡನೆಯ ರಂಧ್ರವನ್ನು ಉಳ್ಳ ಚಕ್ರದಂತಹ ಕಲ್ಲುಗಳು, ಕಾಡು ಪ್ರಾಣಿಗಳನ್ನು ಓಡಿಸಲು ಬಳಸುತ್ತಿದ್ದ ದುಂಡನೆಯ ವಿವಿಧ ಗಾತ್ರದ ಕವಣೆ ಕಲ್ಲುಗಳು. ನೆಲ, ಗೋಡೆ ಮತ್ತು ಮಡಕೆಗಳನ್ನು ಮಟ್ಟಸಗೊಳಿಸಲು ಉಪಯೋಗಿಸುತ್ತಿದ್ದ ಮಟ್ಟಸ ಕಲ್ಲುಗಳು, ಧಾನ್ಯಗಳನ್ನು ಕುಟ್ಟಿ ಪುಡಿ ಮಾಡಲು ಉಪಯೋಗಿಸುತ್ತಿದ್ದ ದುಂಡನೆಯ ಒನಕೆಯಂತಹ ಕಲ್ಲುಗಳು. ಅರೆಕಲ್ಲುಗಳು ದೊರೆತಿದ್ದು. ಇವುಗಳ ಆಧಾರದ ಮೇಲೆ ತುಳುನಾಡಿನಲ್ಲಿ ನೂತನ ಶಿಲಾಯುಗದ ಮಾನವ ಅತ್ಯಂತ ಪುರಾತನ ರೀತಿಯಲ್ಲಿ ನೆಲವನ್ನು ಅಗೆದು, ಉತ್ತು ಕೃಷಿಯನ್ನು ನಡೆಸುತಿದ್ದನೆಂದು ತಿಳಿಯಬಹುದಾಗಿದೆ. ಕೃಷಿ ಮತ್ತು ಪಶುಪಾಲನೆಯಿಂದಾಗಿ ಆತ ತುಳುನಾಡಿನ ಅಲ್ಲಲ್ಲಿ ಸರಳವಾದ ಗುಡಿಸಲುಗಳನ್ನು ಎತ್ತರವಾದ ಹಾಗೂ ಬಂಡೆಗಳಿಂದ ಆವೃತ್ತವಾದ ಪ್ರದೇಶಗಳ್ಲಿ ವೃತ್ತಾಕಾರದ ಗುಡಿಸಲುಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದನೆಂದು ತಿಳಿಯಲಾಗಿದೆ. ಪಾಜೈ ಮತ್ತು ಗಾವಳಿಯಲ್ಲಿ ಇಂತಹ ರಚನೆಗಳ ಅವಶೇಷಗಳು ಇಂದಿಗೂ ಉಳಿದು ಬಂದಿವೆ. ಕೋಟತಟ್ಟು ಮತ್ತು ಕಲ್ಯಾಣಪುರದಲ್ಲಿ ದೊರೆತ ಅರೆಗಲ್ಲುಗಳು (ಕಡೆಯುವ ಕಲ್ಲು) ನೂತನ ಶಿಲಾಯುಗದ ಮಾನವನ

ಕೌಟುಂಬಿಕ ಸ್ಥಿರ ಜೀವನದ ಪ್ರಬಲ ಸಾಕ್ಷ್ಯಗಳಾಗಿವೆ. ಮನೆಯ ಬಾಗಿಲುಗಳು ಸರಾಗವಾಗಿ ಚಲಿಸುವಂತೆ ಮಾಡಲು ಬಾಗಿಲ ಪಟ್ಟಿಯ ಕೆಳಗೆ ಸೇರಿಸಲಾಗಿದ್ದ ರಂಧ್ರವಿರುವ ದುಂಡನೆಯ ಕಲ್ಲುಗಳು ಕಾಸರಗೋಡಿನ ಕಯ್ಯಾರ ಮತ್ತು ಗಾವಳಿಯಲ್ಲಿ ದೊರೆತಿವೆ. ಈ ಎಲ್ಲಾ ಸಾಕ್ಷ್ಯಗಳು ತುಳುನಾಡಿನ ತುಳುವರ ಸ್ಥಿರ ಬದುಕಿಗೆ ಭದ್ರವಾದ ಬುನಾದಿಯನ್ನು ಹಾಕಿದವನು ನೂತನ ಶಿಲಾಯುಗದ ಮಾನವ ಎಂಬುದನ್ನು ಸಂಶಯಾತೀತವಾಗಿ ಸ್ಪಷ್ಟಪಡಿಸುತ್ತವೆ. ತುಳುನಾಡಿನ ನೂತನ ಶಿಲಾಯುಗದ ಮಾನವ ಸ್ಥಳೀಯವಾಗಿಯೇ ದೊರೆಯುತ್ತಿದ್ದ ಡಾಲರೈಟ್ ಶಿಲೆಯಲ್ಲಿ ತನ್ನ ಆಯುಧಗಳನ್ನು ತಯಾರಿಸಿರವುದು ಗಮನಾರ್ಹ ಸಂಗತಿಯಾಗಿದೆ. ತುಳುನಾಡಿನ ಖಜಾನೆ, ಮಾಣಿಬೆಟ್ಟು, ಗಾವಳಿ ಮತ್ತಿತರ ಪ್ರದೇಶಗಳಲ್ಲಿ ಧಾನ್ಯವನ್ನು ಕುಟ್ಟಲು ನೈಸರ್ಗಿಕ ಬಂಡೆಗಳಲ್ಲಿ ಆತ ಮಾಡಿಕೊಂಡಿರುವ ಅಗಲವಾದ ಮತ್ತು ಆಳವಾದ ಕಲ್ಗುಳಿಗಳು ಕಂಡು ಬರುತ್ತವೆ. ಗಾವಳಿಯಲ್ಲಿ ಎರಡು ಸಮಾನಾಂತರ ಸಾಲುಗಳಲ್ಲಿ ರಚಿಸಿದ ಬಹುತೇಕ ಚೆನ್ನೆಮಣೆಯನ್ನು ಹೋಲುವ ಜೋಡಿ ಕಲ್ಗುಳಿಗಳಿವೆ. ಮಾಣಿಬೆಟ್ಟು, ಪಳ್ಳಿ ಮತ್ತಿತರ ಸ್ಥಳಗಳಲ್ಲಿಯೂ ಈ ರೀತಿಯ ಕಲ್ಗುಳಿಗಳು ಕಂಡು ಬರುತ್ತವೆ. ಕರ್ನಾಟಕದ ಇತರೆ ಭಾಗಗಳಲ್ಲಿ ಇವುಗಳನ್ನು ಹಳೆಗುಳಿ ಮಣೆ ಎಂದು ಕರೆಯುತ್ತಾರೆ. ಕೃಷಿ, ಪಶುಪಾಲನೆ ಮತ್ತು ಕುಂಬಾರಿಕೆ ಹಾಗೂ ಚಿನ್ನದ ಗಣಿಗಾರಿಕೆ ಈ ಕಾಲದ ಪ್ರಮುಖ ಆರ್ಥಿಕ ಚಟುವಟಿಕೆಗಳಾಗಿದ್ದವು. ಕರಾವಳಿಯ ನೂತನ ಶಿಲಾಯುಗದ ಜನರು, ಒಂದೋ ಹರಪ್ಪಾ ನಾಗರೀಕತೆಯ ಉಗಮಕ್ಕೆ ಕಾರಣೀಭೂತರಾಗಿದ್ದರು, ಇಲ್ಲವೆ ಅವರ ಸಮಕಾಲೀನರಾಗಿ ಹರಪ್ಪನ್ನರಿಗೆ ಚಿನ್ನ, ದಂತ ಮತ್ತಿತರ ವಸ್ತುಗಳ ರಫ್ತು ಮಾಡುತ್ತಿದ್ದರು. ಹರಪ್ಪನ್ನರ ಅನೇಕ ಧಾರ್ಮಿಕ ಸಂಗತಿಗಳು ಕರಾವಳಿಯ ನೂತನ ಶಿಲಾಯುಗದ ನಂದಿ ಪಂಥ, ಮಾತೃದೇವತೆ ಪಂಥ, ನಾಗ ಪಂಥ, ಮುಂತಾದ ನಂಬಿಕೆಗಳಿಂದ ಪ್ರಭಾವಿತವಾಗಿರುವಂತೆ ಕಂಡುಬರುತ್ತದೆ. ಕಾಡು-ಬೆಟ್ಟಗಳ ನಡುವೆ ಹಾಡಿಗಳಲ್ಲಿ ವಾಸ ಮಾಡುತ್ತಿದ್ದ ಕರಾವಳಿಯ ನೂತನ ಶಿಲಾಯುಗದ ಜನರು ಹಂದಿ-ನಂದಿ, ನಾಗ-ನವಿಲು, ಮಂಗ-ಆನೆ ಮುಂತಾದ ಕುಲ ಲಾಂಛನಗಳೊಂದಿಗೆ ವಾಸಿಸುತ್ತದ್ದರು ಹಾಗೂ ಆ ಲಾಂಛನಗಳನ್ನು ಮುಖವಾಡಗಳಾಗಿ ಧರಿಸುತ್ತಿದ್ದರು.

## ತಾಮ್ರ ಶಿಲಾಯುಗ:

ನೂತನ ಶಿಲಾಯುಗದ ನಂತರ ಕಂಡು ಬರುವ ಸಂಸಕೃತಿಯನ್ನು ತಾಮ್ರ ಶಿಲಾಯುಗವೆಂದು ಕರೆಯಲಾಗುತ್ತದೆ. ತುಳುನಾಡಿನಲ್ಲಿ ಈ ಸಂಸ್ಕೃತಿಯ ನಿಶ್ಚಿತ ನಿವೇಶನಗಳು ಕಂಡು ಬರುವುದಿಲ್ಲ. ಆದರೆ, ಬುದ್ಧನಜೆಡ್ಡು ಮತ್ತು ಗಾವಳಿಯ



ಬುದ್ದನ ಜೆಡ್ಡು ನವಿಲು



ಬುದ್ದನ ಜೆಡ್ಡು ನವಿಲು

ನಿವೇಶನಗಳನ್ನು ನೂತನ ಶಿಲಾಯುಗ-ತಾಮ್ರ ಶಿಲಾಯುಗ ನಿವೇಶನಗಳೆಂದು ಪರಿಗಣಿಸಲು ಅವಕಾಶವಿದೆ. ಅಂತೆಯೇ, ತೀರ್ಥಹಳ್ಳಿ ತಾಲೂಕಿನ ಮೃಗವಧೆಯಲ್ಲಿ ನೂತನ ಶಿಲಾಯುಗ ಮತ್ತು ತಾಮ್ರ ಶಿಲಾಯುಗಕ್ಕೆ ಸೇರಿದ ಆದಿಮ ಬಯಲು ಬಂಡೆ ಚಿತ್ರಗಳು ಆ ನಿವೇಶನಗಳಲ್ಲಿ ಕಂಡು ಬಂದಿವೆ. ಬಂಡೆಗಳ ಮೇಲೆ ಚೂಪಾದ ತಾಮ್ರ ಇಲ್ಲವೆ ಕಂಚಿನ ಆಯುಧಗಳಿಂದ ರಚಿಸಿರುವ ಗೀರು ಚಿತ್ರಗಳು ಬುದ್ಧನಜೆಡ್ಡುವಿನಲ್ಲಿ ಕಂಡು ಬರುತ್ತವೆ. ಹರಪ್ಪಾದ ಮುದ್ರೆಗಳು ಮತ್ತು ಮಡಕೆಗಳ ಮೇಲೆ ಕಂಡು ಬರುವ ಢಮರು (ಆಡಿಣಾಟ) ವಿನ ಚಿತ್ರವನ್ನು ಹೋಲುತ್ತದೆ. ತೀರ್ಥಹಳ್ಳಿ ತಾಲೂಕಿನ ಮೃಗವಧೆ ಸಮೀಪದ ಮಲ್ಲಾಪುರ ಎಂಬಲ್ಲಿ ತುಂಗಾ ನದಿಯ ಉಪನದಿಯಾದ ಬ್ರಾಹ್ಮಿ ನದಿಯ ಎಡ ದಂಡೆಯ ಮೇಲೆ ಗೂಳಿಯ ಗೀರುಚಿತ್ರಗಳಿವೆ. ಇದರಲ್ಲಿನ ಒಂದು ಗೂಳಿಯ ಚಿತ್ರ ಯಥಾವತ್ತಾಗಿ ಹರಪ್ಪಾದ ಗೂಳಿಯ ಚಿತ್ರವನ್ನು ಹೋಲುತ್ತದೆ. ಈ ಚಿತ್ರಗಳ ಆಧಾರದ ಮೇಲೆ ಡಾ. ಅ. ಸುಂದರ ಅವರು ಬುದ್ಧನಜೆಡ್ಡು ಹಾಗೂ ಮೃಗವಧೆ ನಿವೇಶನವನ್ನು ನೂತನ ಶಿಲಾಯುಗ-ತಾಮ್ರ ಶಿಲಾಯುಗ ನಿವೇಶವೆಂದು ಗುರುತಿಸಿರುತ್ತಾರೆ. ಬೃಹತ್ ಶಿಲಾಯುಗದ ಸಮಾಧಿಗಳೆಂದು ಇದುವರೆಗೆ ನಂಬಲಾಗಿದ್ದ ಕೆಲವು ಸಮಾಧಿಗಳು ತಾಮ್ರ ಶಿಲಾಯುಗದ ಕಾಲದ ಸಮಾಧಿಗಳೆಂದು ಧೃಡಪಟ್ಟಿವೆ. ಕೇರಳದ ಪೊರೆಡಮ್ ಮತ್ತು ಮಲಯಾಳಪ್ಪುಝದ ಎರಡು ಕುಂಭ ಸಮಾಧಿಗಳು ತಾಮ್ರ ಶಿಲಾಯುಗದ ಸಮಾಧಿಗಳೆಂದು ಡಾ. ಪಿ. ರಾಜೇಂದ್ರನ್ ಪ್ರತಿಪಾದಿಸಿದ್ದಾರೆ. ಉಡುಪಿ ಸಮೀಪದ ಪೆರಂಪಳ್ಳಿಯಲ್ಲಿ ಇತ್ತೀಚೆಗೆ ಪತ್ತೆಯಾದ ಗುಹಾ ಸಮಾಧಿಯು ತಾಮ್ರ ಶಿಲಾಯುದ ಸಮಾಧಿಯೆಂದು ಪ್ರೊ. ಟಿ. ಮುರುಗೇಶಿಯವರು ತಿಳಿಸಿರುತ್ತಾರೆ.

ಕಬ್ಬಿಣಯುಗ ಅಥವಾ ಬೃಹತ್ ಶಿಲಾಯುಗ:

ತಾಮ್ರ ಶಿಲಾಯುಗದ ನಂತರದ ಕಾಲಘಟ್ಟವನ್ನು ಕಬ್ಬಿಣಯುಗ ಅಥವಾ ಬೃಹತ್ ಶಿಲಾಯುಗವೆಂದು ಕರೆಯಲಾಗುತ್ತದೆ. ತುಳುನಾಡಿನಾದ್ಯಂತ ಈ ಕಾಲದ ಸಮಾಧಿ ನೆಲೆಗಳು ವ್ಯಾಪಕವಾಗಿ ಕಂಡು ಬರುತ್ತವೆ. ವೈವಿಧ್ಯಮಯ ಸಮಾಧಿಗಳ ರಚನೆ ಈ

ಕಾಲದ ಒಂದು ಪ್ರಮುಖ ಲಕ್ಷಣ. ಬೃಹತ್ ಶಿಲೆಗಳನ್ನು ಸಮಾಧಿಗಳ ರಚನೆಗೆ ಬಳಸಿರುವುದರಿಂದ ಈ ಕಾಲವನ್ನು ಬೃಹತ್ ಶಿಲಾಯುಗವೆಂದು ಕರೆಯಲಾಗುತ್ತದೆ. ಈ ಯುಗದ ಮನುಷ್ಯನೇ ಕಬ್ಬಿಣವನ್ನು ಪರಿಚಯಿಸಿದ್ದರಿಂದ ಈ ಕಾಲವನ್ನು ಕಬ್ಬಿಣಯುಗವೆಂತಲೂ ಕರೆಯಲಾಗುತ್ತದೆ. ಈ ಕಾಲದ ಸಮಾಧಿಗಳ ರಾಚನಿಕ ಲಕ್ಷಣದ ಆಧಾರದ ಮೇಲೆ ತುಳುನಾಡಿನಲ್ಲಿ ಕಂಡು ಬರುವ ಸಮಾಧಿಗಳನ್ನು ಈ ಕೆಳಕಂಡಂತೆ ಗುರುತಿಸಲಾಗಿದೆ.

೧. **ಗುಹಾ ಸಮಾಧಿಗಳು**
೨. **ನಿಲಿಸುಕಲ್ಲು ಸಮಾಧಿಗಳು**
೩. **ಕಲ್ಮನೆ ಸಮಾಧಿಗಳು**
೪. **ಕುಂಭ ಸಮಾಧಿಗಳು**
೫. **ಶಿಲಾವೃತ್ತ ಸಮಾಧಿಗಳು**

ಮೊದಲಿನ ಗುಹಾ ಸಮಾಧಿಗಳನ್ನು ಹೊರತು ಪಡಿಸಿ, ಇತರೆಲ್ಲಾ ಸಮಾಧಿಗಳು ದಕ್ಷಿಣ ಭಾರತದೆಲ್ಲೆಡೆ ಕಂಡು ಬರುತ್ತವೆ. ತುಳುನಾಡಿನಲ್ಲಿ ನಿಲಿಸುಕಲ್ಲು ಸಮಾಧಿಗಳನ್ನು ಗರ್ಭಿಣಿಯರ ಸಮಾಧಿಗಳೆಂತಲೂ ಕರೆಯಲಾಗುತ್ತದೆ. ಕಲ್ಮನೆ ಸಮಾಧಿಗಳನ್ನು, ಪಾಂಡವರ ಕಲ್ಲು, ಪಾಣಾರ ಅರೆಕಲ್ಲು, ತೂಂತ್‌ಕಲ್ಲು, ಮದ್ಮಲ್‌ಗುಂಡ, ಬೋರ್ಕಲ್ಲು, ಮಂಚಕಲ್ಲು ಮುಂತಾದ ಹೆಸರುಗಳಿಂದ ಕರೆಯಲಾಗುತ್ತದೆ.

ಕಬ್ಬಿಣದ ಬಳಕೆ ಮಾನವ ಬದುಕಿಗೆ ಇನ್ನಿಲ್ಲದ ಬಲವನ್ನು ತಂದುಕೊಟ್ಟಿತು. ಕಾಡುಗಳನ್ನು ಕಡಿದು ಈ ಕಾಲದ ಮಾನವ ಕೃಷಿ ವಿಸ್ತರಣೆ, ಪಶುಪಾಲನೆಯನ್ನು ತೀವ್ರಗೊಳಿಸಿದ. ತುಳುನಾಡಿನಲ್ಲಿ ಕಂಡು ಬರುವ ಸಮಾಧಿಗಳ ಅಗಾಧ ಸಂಖ್ಯೆಯನ್ನು ಗಮನಿಸಿದರೆ, ಬೃಹತ್ ಶಿಲಾಯುಗದ ಕರಾವಳಿಯಲ್ಲಿ ಹೊಸ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ವ್ಯವಸ್ಥೆಗಳು ರೂಪುಗೊಂಡಂತೆ ಕಂಡುಬರುತ್ತದೆ. ದಕ್ಷಿಣಕನ್ನಡ ಜಿಲ್ಲೆಯ ಬಡಗ–ಕಜೆಕಾರಿನ ಸಮೀಪದ ಪಾಂಡವರಕಲ್ಲು, ಮೂಡುಕೊಣಾಜೆ, ಸುಬ್ರಹ್ಮಣ್ಯ, ಆತೂರು–ಕುಂಡಾಜೆ, ನಿಂತಿಕಲ್ಲು, ಕಲ್ಲೆಂಬಿ, ಪಾವಂಜೆ ಮುಂತಾದ ಕಡೆಗಳಲ್ಲಿ ಸಮಾಧಿ ನೆಲೆಗಳಿವೆ. ಉಡುಪಿಯ ಬ್ರಹ್ಮಗಿರಿ, ಕನ್ನರಪಾಡಿ, ಕಪ್ಪೆಟ್ಟು, ಕೊರಂಗ್ರಪಾಡಿ, ಗರಡೆ, ಕೊಜಕುಳಿ, ಪೆರಂಪಳ್ಳಿ, ಇಂದ್ರಾಳಿ, ನಿಟ್ಟೂರು, ಕುರ್ಕಾಲು, ಶಿರ್ವ, ಸೂಡಾ, ಬಂಟಕಲ್ಲು, ಸಡಂಬೈಲು, ಸಾಂತೂರು, ಬೊಮ್ಮರಬೆಟ್ಟು, ಕೊಂಡಾಡಿ, ಬ್ರಹ್ಮಾವರ, ಹಾರಾಡಿ, ಕೀಳಿಂಜೆ, ಹಿರಿಯಡಕ, ನಿಲಾವರ, ಉಪ್ಪೂರು, ಉದ್ಯಾವರ, ಬೆಳೂರು, ಹೆಬ್ರಿ, ಪಳ್ಳಿ, ಬೋರ್ಕಟ್ಟೆ, ಕಬ್ಬಿನಹಿತ್ಲು, ಹೊಯ್ಯಾಣ ಸೊರ್ಪು, ಬುದ್ಧನಜೆಡ್ಡು, ಕಮಲಶಿಲೆ, ಅಂಬಲಪಾಡಿ, ಬಾರಕೂರು, ಕದಳಿ, ಮುಂತಾದ ಕಡೆ ನೂರಾರು ಸಂಖ್ಯೆಯಲ್ಲಿ ಬೃಹತ್ ಶಿಲಾಯುಗದ ಸಮಾಧಿ ನೆಲೆಗಳು ಪತ್ತೆಯಾಗಿವೆ. ಕಾಸರಗೋಡು ಮತ್ತು ಉತ್ತರಕನ್ನಡ ಜಿಲ್ಲೆಯಲ್ಲಿಯೂ ಸಮಾಧಿ ನೆಲೆಗಳು ಕಂಡು ಬಂದಿವೆ.

ನೂತನ ಶಿಲಾಯುಗ ಮತ್ತು ತಾಮ್ರ ಶಿಲಾಯುಗದಲ್ಲಿ ಬೆಟ್ಟ–ಗುಡ್ಡ, ಕಾಡಂಚಿನ ಹಾಡಿಗಳಲ್ಲಿ ಬದುಕುತ್ತಿದ್ದ ಮಾನವ, ಬೃಹತ್ ಶಿಲಾಯುಗದಲ್ಲಿ ಪಾಡಿ–ಪಳ್ಳಿಗಳಲ್ಲಿ ವಾಸಿಸತೊಡಗಿದ. ಈ ಕಾಲಘಟ್ಟದಲ್ಲಿ ನಿಧಾನವಾಗಿ ತುಳುನಾಡಿನಲ್ಲಿ ಹಳ್ಳಿಗಳ ರೂಪದ ಗ್ರಾಮಗಳು ತಲೆಯೆತ್ತಿದವು. ಇದಕ್ಕೆ ಅತ್ಯುತ್ತಮ ಉದಾಹರಣೆ ಪಾಡಿ, ಪಳ್ಳಿ, ಹಳ್ಳಿ, ಊರು ಹೆಸರಿನ ತುಳುನಾಡಿನ ನೂರಾರು ಊರುಗಳೆ ಸಾಕ್ಷಿಯಾಗಿವೆ. ಉದಾಹರಣೆಗೆ, ಕೊರಂಗ್ರಪಾಡಿ, ಕನ್ನರಪಾಡಿ, ಅಂಬಲಪಾಡಿ, ಪಳ್ಳಿ, ಪೆರಂಪಳ್ಳಿ, ಶಿವಳ್ಳಿ, ನಿಟ್ಟೂರು, ಉಪ್ಪೂರು, ಇತ್ಯಾದಿ. ಈ ಬೆಳವಣಿಗೆ ಚಿಕ್ಕ ಚಿಕ್ಕ ಗ್ರಾಮ ಕೇಂದ್ರಿತವಾದ ಬುಡಕಟ್ಟು ನಾಯಕತ್ವದ ಉಗಮಕ್ಕೆ ನಾಂದಿಯಾಯಿತು.
ಕಬ್ಬಿಣದ ಉಪಯೋಗ ತೀವ್ರವಾದ ಸಾಮಾಜಿಕ ಸಂಚಲನವನ್ನು ಸೃಷ್ಟಿಸಿತು, ಸಾಮಾಜಿಕ ಭಿನ್ನತೆ, ವೃತ್ತಿ ಆಧಾರಿತ ಗುಂಪುಗಳ ರಚನೆ, ಹೊಸ ರಾಜಕೀಯ, ಧಾರ್ಮಿಕ ಪ್ರವೃತ್ತಿಗಳ ಬೆಳವಣಿಗೆಗೆ ಕಾರಣವಾಯಿತು. ಕುಂಬಾರ, ನೇಕಾರ, ಕಮ್ಮಾರ, ಚಿನಿವಾರ, ಬಡಗಿ, ಮೀನುಗಾರ, ಪೂಜಾರಿ, ಶೆಟ್ಟಿ, ಮುಂತಾದ ಗುಂಪುಗಳ ಪುಟ್ಟ ಪುಟ್ಟ ಹಳ್ಳಿಗಳ ವಿಕಾಸಕ್ಕೆ ಅವಕಾಶಗಳನ್ನು ಸೃಷ್ಟಿಸಿತು. ಇದೇ ಕಾಲಘಟ್ಟದಲ್ಲಿ, ವ್ಯಾಪಾರ, ಸಮುದ್ರಯಾನ ಮುಂತಾದವುಗಳು ಚುರುಕುಗೊಂಡವು.



ಕದಳಿ